ಆಶ್ಚರ್ಯ ಚಕಿತನಾಗಿ ಅವಳನ್ನೇ ದಿಟ್ಟಿಸಿ ನೋಡಿದ. ಮುಜೀಬ್ ಮಾತ್ರ ಬರುತ್ತಿದ್ದ ಅಪಾರ ನಗುವನ್ನು ತಡೆದುಕೊಂಡು ಆಶ್ಚರ್ಯಚಕಿತನಾಗಿ ಅವಳತ್ತ ನೋಡಲಾರಂಭಿಸಿದ. ಒಮ್ಮೆಲೇ ತಾನು ಉಪಾಧ್ಯಾಯಿನಿ ಎಂಬ ವಾಸ್ತವತೆ ಅವಳ ಎದುರಿನಲ್ಲಿ ತೆರೆದುಕೊಳ್ಳುತ್ತಿದ್ದಂತೆಯೇ ಅವಳು ತನ್ನ ಎಲ್ಲಾ ಹೆದರಿಕೆಗಳನ್ನು ಗತ್ತಿನಲ್ಲಿ ಬದಲಾಯಿಸಿಕೊಂಡಳು. ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಒಂದಿಬ್ಬರು ಯುವಕರು ತಮ್ಮ ನಗುವನ್ನು ತುಟಿಯಂಚುಗಳಲ್ಲಿಯೇ ಅಡಗಿಸಿಕೊಂಡು ಮುಜೀಬ್‌ನ ಹಿಂದೆ ಬಂದು ನಿಂತರು. ಅವಳು ಕೌಂಟರ್ ಮೇಲೆ ಕುಳಿತಿದ್ದ ನಾಲ್ಕು ಮೂಲೆಯ ದಪ್ಪನೆಯ ಮಾನಿಟರನ್ನು ನೋಡುತ್ತಾ ಅಧಿಕಾರವಾಣಿಯಿಂದ ಆದೇಶ ಮಾಡಿದಳು 'ನೋಡಪ್ಪಾ ಇದರೊಳಗೆ ಯಾರು ಯಾರು ಟೆರರಿಸ್ಟಗಳು ಅಡಗಿ ಕೂತಿದ್ದಾರೆ ಅವರೆಲ್ಲರನ್ನು ನನಗೆ ತೋರಿಸು. ನಾನು ಅವರ ಜೊತೆ ಮಾತನಾಡಬೇಕಾಗಿದೆ. ಅವರು ಮಾಡುತ್ತಿರುವುದು ಸರೀನಾ ಅಂತ ಕೇಳಬೇಕಾಗಿದೆ. ಪಾಪದ ಹೆಂಗಸರು ಮಕ್ಕಳು ಮತ್ತೆ ಅಮಾಯಕರನ್ನ ಕೊಲ್ಲುವುದು ಬಾಂಬ್ ಸಿಡಿಸುವುದು ಮತ್ತೆ ಪ್ಲೇನನ್ನು ಸಿಡಿಸುವುದು ಯಾವ ರೀತಿಯಲ್ಲಿ ಅಲ್ಲಾಹನಿಗೆ ಪ್ರೀತಿ ಎಂಬುದನ್ನು ನಾನು ಕೇಳಬೇಕಾಗಿದೆ. ನಮ್ಮ ಅಜ್ರಾ ಕೂಡ ದುಬೈನಲ್ಲಿ ಇದಾಳಲ್ಲ, ಮೊನ್ನೆ ಮೊನ್ನೆ ತಾನೆ ಅವಳ ಮದುವೆ ಆಯಿತಲ್ಲ ಅವಳೇನಾದರೂ ನನ್ನನ್ನು ನೋಡೋದಿಕ್ಕೆ ಅಂತ ಇಂಡಿಯಾಗೆ ಮರಳುವಾಗ ಅವಳ ಪ್ಲೇನನನ್ನು ಇವರು ಸಿಡಿಸಿದರೆ ನಾನಾದರೂ ಏನು ಮಾಡಬೇಕು ಹೇಳು?' ಎಂದು ಜಬರಿಸಿದಳು. ಆದರೆ, ಅಜ್ರಾ ಪ್ರಯಾಣಿಸುವ ವಿಮಾನ ಸಿಡಿಯುವ ದೃಶ್ಯ ಅವಳ ಕಣ್ಣಲ್ಲಿ ಮೂಡುತ್ತಿದ್ದಂತೆಯೆ ಅವಳ ಭಾವಕೋಶದ ಕಟ್ಟೆಯೊಡೆದಿತ್ತು. ಅವಳ ಕಣ್ಣುಗಳು ಮಾತ್ರ ಹನಿಗೂಡಿರಲಿಲ್ಲ ಅವಳ ಇಡೀ ಅಸ್ತಿತ್ವವೇ ಕಣ್ಣೀರುಗರೆಯುತ್ತಿತ್ತು. ಆ ಯುವಕರ ತುಟಿಯಲ್ಲಿ ಮೂಡಿದ್ದ ನಗು ಹಾಗೆಯೆ ಮಾಯವಾಯಿತು. ಅವಳು ಗಟ್ಟಿಸಿ ಕೇಳುತ್ತಿದ್ದ ಕ್ರಮದಿಂದಲೇ ತಾನು ಉತ್ತರ ಹೇಳಬೇಕಾದ ದಯನೀಯ ಪರಿಸ್ಥಿತಿಗೆ ದೂಡಲ್ಪಟ್ಟಿದ್ದೇನೆ ಎಂಬ ತಿಳಿವಿಗೆ ತೆರೆದುಕೊಂಡ ಮುಜೀಬ್ ಮಾತುಗಳು ಸಿಗದೆ ತಡವರಿಸುತ್ತಿದ್ದ.

ಇಷ್ಟು ಹೊತ್ತಿಗಾಗಲೇ ಅಂಗಡಿಯಿಂದ ಹೊರಗೋಡಿ ಹೋಗಿದ್ದ ಕೈಸರ್ ಯಾವುದೋ ಒಂದು ಜೋಕ್ ಅನ್ನು ಆಸ್ವಾದಿಸುವಂತೆ ಅವಳ ಅಜ್ಞಾನ ಮತ್ತು ಮುಗ್ಧತೆಯನ್ನು ಕುರಿತು ಮನಸೋ ಇಚ್ಛೆ ನಕ್ಕ. ಯಾರು ತನ್ನನ್ನು ನೋಡುತ್ತಿದ್ದಾರೆ ಎಂಬ ಪರಿವೆ ಇರದೆ ಅವನು ಹೊಟ್ಟೆ ಬಿರಿಯುಂತೆ ನಗಲಾರಂಭಿಸಿದ. ನಕ್ಕು ನಕ್ಕು ಸಾಕಾದ ಮೇಲೆ ಅವನು ತನ್ನ ಮೊಬೈಲನ್ನು ಸರಸರನೆ ಒತ್ತಿ ನಯಾಜ್‌ನ ಫೋನನ್ನು ಕಿವಿಗೆ ಆನಿಸಿ 'ಹಲೋ' ಎಂದ. ಅವನಿನ್ನೂ ನಗುತ್ತಲೇ ಇದ್ದ.

ರೆಹಮತ್‌ಳ ಪ್ರಶ್ನೆಗಳೆಲ್ಲವೂ ಸಮಂಜಸ ಮತ್ತು ಸಮಯೋಚಿತವಾಗಿವೆ ಎಂದು ಅವಳ ಕಾಳಜಿಯೂ ಕೂಡ ತನ್ನ ಧರ್ಮದ ಆಣತಿಗಳಿಗೆ ಅನುವಾಗಿವೆ ಎಂದು ಅನಿಸಿದ್ದರಿಂದ ಮುಜೀಬ್ ಮಾತನಾಡದೆ ವಿಗ್ರಹದಂತೆ ನಿಂತ. ಅವನ ಸಹಾಯಕರಿಬ್ಬರೂ ಕೂಡ ವಿಚಿತ್ರವಾದ ಆ ಸನ್ನಿವೇಶನ್ನು ಕುತೂಹಲದಿಂದ ನೋಡುತ್ತಿದ್ದರು. ಮುಜೀಬ್ ಅತ್ಯಂತ ಕರುಣೆ ಮತ್ತು ಪ್ರೀತಿಯಿಂದ ಅವಳನ್ನೊಮ್ಮೆ ನೋಡಿದ. ಅಲ್ಲಿ ನಿಂತವಳ ಮೋರೆಯಲ್ಲಿ ಅವನ ತಾಯಿಯ ಮೋರೆಯು ಕಂಡಂತಾಯಿತು ಮತ್ತು ಅವನ ತಂಗಿ ಕೂಡ ಇತ್ತೀಚೆಗೆ ಪತಿಯೊಡನೆ ಸ್ಕಾಟ್‌ಲೆಂಡಿಗೆ ಹೋದಳಲ್ಲ! ಅವನು ಸಂಕೋಚದಿಂದ ಹಿಡಿಯಾಗುತ್ತ ಹೇಳಲೋ ಬೇಡವೋ ಎಂದು ಆಲೋಚನೆ ಮಾಡುತ್ತಾ ತೀರಾ ಕೆಳಧ್ವನಿಯಲ್ಲಿ ಹೇಳಿದ 'ಇದರಲ್ಲಿ ಏನೂ ಇರುವುದಿಲ್ಲ